# ಅಂತೂ ಇಂತೂ ಕೂಡಿ ಬಂತು ಕಂಕಣಭಾಗ್ಯ



ಬಿಟೌನಿನ ಗಲ್ಲಿಗಳಲ್ಲಿ ಈಗ ಮದುವೆಯದ್ದೇ ಗುಸುಗುಸು. ಕಳೆದ ಮೂರ್ನಾಲ್ಕು ತಿಂಗಳಿನಿಂದೀಚೆಗೆ ಮುರಿದು ಬಿದ್ದ ಮದುವೆಗಳಿಗೆ ಲೆಕ್ಕವಿಲ್ಲ. ಅಂತೆಯೇ ಹೊಸ ಜೋಡಿಗಳು ಹಸೆಮಣೆ ಏರುತ್ತಲೇ ಇವೆ. ಆದರೆ ಈ ಮದುವೆ ಸುದ್ದಿ ಹೆಚ್ಚು ಕುತೂಹಲಕಾರಿ. ಕಾರಣವಿಷ್ಟೇ ಇದು ಬಾಲಿವುಡ್‌ನ ಒಂದುಕಾಲದ ಅತ್ಯಂತ ಹಾಟ್ ಜೋಡಿಯ ಮದುವೆ. ಅಭಿಮಾನಿಗಳ ಪಾಲಿನ ಬೇಸರದ ಸಂಗತಿಯೆಂದರೆ ಈ ಜೋಡಿ ಬಂಧನಕ್ಕೊಳಪಡುತ್ತಿರುವುದು ಪರಸ್ಪರ ಅಲ್ಲ. ಈ ಜೋಡಿ ಬೇರೆಯಾಗಿ ವರ್ಷಗಳೇ ಉರುಳಿವೆ. ಆದರೆ ಇಬ್ಬರ ಮದುವೆ ಸುದ್ದಿಯೂ ಒಂದರ ಹಿಂದೊಂದು ಕೇಳಿ ಬಂದಿರುವುದು ಕಾಕತಾಳೀಯವೇ ಇರಬಹುದು. ಅಂದ ಹಾಗೆ, ಈ ಜೋಡಿ ಇನ್ಯಾರದೂ ಅಲ್ಲ. ಅದು ಜಾನ್ ಅಬ್ರಹಾಂ ಮತ್ತು ಬಿಪಾಶಾ ಬಸು. ಬಿಪ್ಸ್ ಜೊತೆಗಿನ ನಂಟು ಕಳಚಿಕೊಂಡ ಬಳಿಕ ಜಾನ್ ಹೆಸರು ಅವರಿವರೊಟ್ಟಿಗೆ ಕೇಳಿ ಬಂದಿತ್ತು. ಈಗ ಸದ್ದಿಲ್ಲದೆಯೇ ಗೆಳತಿ ಪ್ರಿಯಾ ರುಂಚಾಲ್‌ರನ್ನು ವರಿಸಿದ್ದಾರೆ ಜಾನ್. ಈ ಇಬ್ಬರ ಮದುವೆಗೆ ಕೆಲವೇ ಆಪ್ತರು ಸಾಕ್ಷಿಯಾಗಿದ್ದರು ಎನ್ನಲಾಗುತ್ತಿದೆ. ಅತ್ತ, ಬಿಪಾಶಾ ಕುಟೀರದಿಂದಲೂ ಮದುವೆಯ ಸುದ್ದಿ ಹೊರಬಿದ್ದಿದೆ. ಸಂಬಂಧಗಳ ನಡುವಿನ ಸಾಕಷ್ಟು ಗೊಂದಲ, ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿರುವ ಬಿಪಾಶಾ ಮತ್ತು ಹರ್ಮನ್ ಬವೇಜಾ ಕೊನೆಗೂ ವಿವಾಹ ಬಂಧನಕ್ಕೊಳಗಾಗಲು ನಿಶ್ಚಯಿಸಿದ್ದಾರೆ. ಎರಡೂ ಕುಟುಂಬಗಳ ಹಿರಿಯರು ಭೇಟಿ ಮಾಡಿ ಮದುವೆಯನ್ನು ಇದೇ ವರ್ಷ ನಡೆಸಲು ತೀರ್ಮಾನಿಸಿದ್ದಾರಂತೆ. ಮದುವೆ ಬಗ್ಗೆ ಹರ್ಮನ್ ಮತ್ತು ಬಿಪ್ಸ್ ಕೂಡ ತುಂಬಾ ಗಂಭೀರವಾಗಿ ಚಿಂತಿಸಿದ್ದಾರಂತೆ. ಹಳೆ ಗೆಳೆಯನ ಮದುವೆಯ ಸುದ್ದಿ ಹೊರಬೀಳುತ್ತಿದ್ದಂತೆಯೇ ಮೊನ್ನೆ ಮೊನ್ನೆ 35ರ ಹರೆಯಕ್ಕೆ ಕಾಲಿಟ್ಟ ಬಿಪಾಶಾ ತಮ್ಮ ಮದುವೆಗೆ ಆತುರ ತೋರುತ್ತಿದ್ದಾರೆ. ಆದರೆ ಟ್ವಿಟ್ಟರ್‌ನಲ್ಲಿ ಜಾನ್ ಮದುವೆಯ ಸುದ್ದಿ ಬಹಿರಂಗಪಡಿಸುವ ಮೊದಲೇ ತನ್ನ ವಿವಾಹದ ಸಂಗತಿಯನ್ನು ಹೊರಗೆಡವಿದ ಖುಷಿಯಲ್ಲಿದ್ದಾರೆ ಬಿಪಾಶಾ.



## ಲವ್ ಇನ್ ನ್ಯೂಯಾರ್ಕ್!

ಇಲ್ಲ ಇಲ್ಲ ಎನ್ನುತ್ತಲೇ ರಣವೀರ್ ಸಿಂಗ್ ಜೊತೆ ಕದ್ದುಮುಚ್ಚಿ ಸುತ್ತಾಡುತ್ತಿದ್ದ ದೀಪಿಕಾ ಪಡುಕೋಣೆ ಗುಪ್ತ ಪ್ರೀತಿಯ ಗುಟ್ಟು ಬಯಲಾಗಿದೆ. ನಾವಿಬ್ಬರೂ ಒಳ್ಳೆ ಸ್ನೇಹಿತರಷ್ಟೇ ಎಂದು ಗಾಸಿಪ್‌ಗಳಿಗೆ ತೇಪೆಹಚ್ಚುತ್ತಿದ್ದ ಡಿಪ್ಸ್ ಮೊನ್ನೆ ಮೊನ್ನೆ ರಣವೀರ್ ಜೊತೆ ಅಭಿಮಾನಿಗಳಿಗೆ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಅದೂ ಭಾರತದ ಗಲ್ಲಿಯಲ್ಲೋ, ಸ್ಟಾರ್ ಹೋಟೆಲ್‌ನಲ್ಲೋ ಅಲ್ಲ. ಝುಗಮುಗ ಬೆಳಕಿನ ನ್ಯೂಯಾರ್ಕ್ ಸಿಟಿಯ ನಡುವೆ. 'ಕಮಿಟ್ ಆಗಲು ಹೆದರಿಕೆಯಾಗುತ್ತದೆ' ಎಂದು ಒಮ್ಮೆ ಹೇಳಿದ್ದ ದೀಪಿಕಾ ಪ್ರೀತಿ ವಿಷಯದಲ್ಲಿ ತುಂಬಾ ಎಚ್ಚರಿಕೆಯಿಂದ ನಡೆಯುತ್ತಿದ್ದರು. ದೀಪಿಕಾ ಬರ್ತ್‌ಡೇ ದಿನ ರಣವೀರ್ ಜೊತೆ ನ್ಯೂಯಾರ್ಕ್‌ನಲ್ಲಿ ಸುತ್ತಾಡುತ್ತಿದ್ದದ್ದು ಅಭಿಮಾನಿಗಳ ಕ್ಯಾಮೆರಾದಲ್ಲಿ ಸೆರೆಯಾಗಿ ಈಗ ಇಂಟರ್‌ನೆಟ್ ತುಂಬಾ ಹರಿದಾಡುತ್ತಿದೆ. 'ನನ್ನ ಬಗ್ಗೆ ಮಾತನಾಡಕೂಡದು' ಎಂದು ರಣವೀರ್‌ಗೆ ಕಟ್ಟುನಿಟ್ಟಾಗಿ ದೀಪಿಕಾ ಸೂಚಿಸಿದ್ದರು ಎಂಬ ಮಾತು ಬಾಲಿವುಡ್ ಅಂಗಳದಲ್ಲಿ ಹಲವು ದಿನಗಳಿಂದ ಸುಳಿದಾಡುತ್ತಿತ್ತು. ದೀಪಿಕಾ ಗುಟ್ಟನ್ನು ಕಾಯ್ದುಕೊಳ್ಳಲು ಇಷ್ಟೆಲ್ಲಾ ಎಚ್ಚರವಹಿಸಿದ್ದರೂ ಹೇಗೋ ಅದು ರಟ್ಟಾಗಿದೆ. ಮಾಲ್ಡೀವ್ಸ್‌ನಲ್ಲಿ ಕುಟುಂಬದೊಟ್ಟಿಗೆ ಹೊಸ ವರ್ಷಾಚರಣೆ ಮಾಡಿದ್ದ ದೀಪಿಕಾ ಅಲ್ಲಿಂದ ನೇರವಾಗಿ ನ್ಯೂಯಾರ್ಕ್‌ಗೆ ಹಾರಿದ್ದರು. ಅವರನ್ನು ಬರಮಾಡಿಕೊಳ್ಳಲು ಆಗಲೇ ರಣವೀರ್ ಕಾಯುತ್ತಿದ್ದರು. ಅಲ್ಲಿ ಒಟ್ಟಿಗೆ ಬ್ರೇಕ್‌ಫಾಸ್ಟ್ ಮುಗಿಸಿದ್ದರು. ರಣವೀರ್ ಸಿಂಗ್ ಎದುರಾದ ಅಭಿಮಾನಿಗಳ ಜೊತೆಗೆ ಒಂದಷ್ಟು ಹರಟಿದರೆ, ದೀಪಿಕಾ ತುಸು ದೂರವೇ ಉಳಿದಿದ್ದರಂತೆ. ಬಾಯ್‌ಫ್ರೆಂಡ್ ಜೊತೆ ಆರಾಮಾಗಿ ಸುತ್ತಾಡಲು ಬಂದರೆ ಇಲ್ಲಿಯೂ ಅಭಿಮಾನಿಗಳ ಕಾಟವೇ ಎಂದು ಡಿಪ್ಸ್ ಬೇಸರಪಟ್ಟುಕೊಂಡರಂತೆ. ಏನೇ ಆಗಲಿ ಗುಬ್ಬಚ್ಚಿ ಗೂಡಿನಲ್ಲಿ ಕದ್ದುಮುಚ್ಚಿ ಕುಚ್ಚಿ ಕುಚ್ಚಿ ಆಡುತ್ತಿದ್ದ ದೀಪಿಕಾ ತಮ್ಮಿಬ್ಬರದು ಗೆಳೆತನ ಮಾತ್ರ ಎಂದು ಹೇಳುತ್ತಿದ್ದದ್ದು ಸುಳ್ಳು ಎನ್ನುವುದಂತೂ ದೃಢಪಟ್ಟಿದೆ. ಇನ್ನು ಅದಕ್ಕೆ ಆಕೆ ಉತ್ತರ ಹೇಳುವುದೊಂದೇ ಬಾಕಿ.

■ ಅಮಿ